ಮೈಸೂರ ಗೆಜೆಟ್ಟ

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 19, ಸ್ರ 1889.

ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಪೀರಿಯಲ್ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೆಗಳಿಂದ ಕೊಡಲ್ಪಟ್ಟ ಆಜ್ಞಾಪತ್ರಗಳು.

ಫೈನಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೈಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ ಪರಾ ಖರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖೆ.

ತಾರೀಖು 21ನೇ ಸಪ್ಟಂಬರ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟ್ ಡಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ತೀರ್ಥಪುರದ ಕೋಠಿ	11ನೇ ನವಂಬರ 1889	ಹೆಚ್ಚು ಕಡಮೆ	300	ಟನ್‌ಗಳು
ಶಿವಮೊಗ್ಗಾ ಡಿಟೋ	15ನೇ ಡಿಟೋ	..	350	ಡಿಟೋ
ತೀರ್ಥಹಳ್ಳಿ ಡಿಟೋ	20ನೇ ಡಿಟೋ	..	120	ಡಿಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋಠಿ	27ನೇ ಡಿಟೋ	..	200	ಡಿಟೋ
ಹಾಸನ ಡಿಸ್ಟ್ರಿಕ್ಟು—ಹಾಸನ ಕೋಠಿ	3ನೇ ಡಿಸಂಬರ	..	300	ಡಿಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಟಣ ಕೋಠಿ	9ನೇ ಡಿಟೋ	..	400	ಡಿಟೋ
ಹುಣಸೂರು ಡಿಟೋ	14ನೇ ಡಿಟೋ	..	600	ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋಠಿ	19ನೇ ಡಿಟೋ	..	150	ಡಿಟೋ